# ಎಟಿಎಂ ಸೆಂಟರ್ ನಲ್ಲಿ ಮಾಡಬೇಕಾದ ಮತ್ತು ಮಾಡಬಾರದ ವಿಚಾರಗಳು

**ಮಾಡಬೇಕಾದ ವಿಚಾರಗಳು:**

- ☑ ನಿಮ್ಮ ಎಟಿಎಂ ವಹಿವಾಟುಗಳನ್ನು ಸಂಪೂರ್ಣವಾಗಿ ಗೌಪ್ಯತೆಯಲ್ಲಿ ನಡೆಸಿ.
- ☑ ನೀವು ನಿಮ್ಮ ವೈಯಕ್ತಿಕ ಗುರುತಿನ ಸಂಖ್ಯೆಯನ್ನು (ಎಟಿಎಂ ಪಾಸ್‌ವರ್ಡ್) ನಮೂದಿಸುವಾಗ, ಅದನ್ನು ಯಾರೂ ನೋಡಲು ಬಿಡಬೇಡಿ.
- ☑ ನಿಮ್ಮ ವಹಿವಾಟು ಪೂರ್ಣಗೊಂಡ ನಂತರ ಎಟಿಎಂ ಪರದೆಯ ಮೇಲೆ "ಸ್ವಾಗತ ಕೋರುವ ಬರಹ" ಪ್ರದರ್ಶಿಸಲ್ಪಟ್ಟಿದೆಯೇ ಎಂದು ಖಚಿತಪಡಿಸಿಕೊಳ್ಳಿ.
- ☑ ನಿಮ್ಮ ಎಟಿಎಂ ಪಿನ್ ಅನ್ನು ಸದಾ ರಹಸ್ಯವಾಗಿಡಿ.
- ☑ ನಿಮ್ಮ ಎಟಿಎಂ ಪಿನ್ ಅನ್ನು (ವೈಯಕ್ತಿಕ ಗುರುತಿನ ಸಂಖ್ಯೆ) ಜ್ಞಾಪಕದಲ್ಲಿ ಇಟ್ಟುಕೊಳ್ಳಿ.
- ☑ ನಿಮ್ಮ ವಹಿವಾಟುಗಳ ಬಗ್ಗೆ ಮೊಬೈಲ್ ನಲ್ಲಿ ಮಾಹಿತಿ ಪಡೆಯಲು (ಮೊಬೈಲ್ ಅಲರ್ಟ್), ನಿಮ್ಮ ಪ್ರಸ್ತುತ ಮೊಬೈಲ್ ಸಂಖ್ಯೆಯನ್ನು ಬ್ಯಾಂಕ್ ನಲ್ಲಿ ನೋಂದಾಯಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಿ.
- ☑ ಎಟಿಎಂ ನೊಂದಿಗೆ ಹೆಚ್ಚುವರಿ ಸಾಧನಗಳನ್ನೇನಾದರೂ ಜೋಡಿಸಲಾಗಿದೆಯೇ ಎಂದು ಗಮನಿಸಿ.
- ☑ ನಿಮಗೆ ಏನಾದರೂ ಅನುಮಾನಾಸ್ಪದವಾಗಿ ಕಂಡುಬಂದಲ್ಲಿ ದಯವಿಟ್ಟು ಅದರ ಬಗ್ಗೆ, ಲಗತ್ತಿಸಲಾದ ಶಾಖೆಯ ಸಂಪರ್ಕ ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಿ.
- ☑ ನಿಮ್ಮ ವಹಿವಾಟುಗಳ ಬಗ್ಗೆ ಮಾಹಿತಿ ನೀಡುವ ಮೊಬೈಲ್ SMS ಅಲರ್ಟ್ ಗಳನ್ನು ಮತ್ತು ನಿಮ್ಮ ಬ್ಯಾಂಕ್ ನ ಸ್ಟೇಟ್ಮೆಂಟ್ ಅನ್ನು ಆಗಾಗ ಪರಿಶೀಲಿಸುತ್ತಿರಿ.
- ☑ ಎಟಿಎಂ ನಿಂದ ಹಣ ವಿತರಣೆಯಾಗದಿದ್ದಲ್ಲಿ, ದಯವಿಟ್ಟು ಮೇಲೆ ತಿಳಿಸಲಾದ ಶಾಖೆಯ ಸಂಪರ್ಕ ಸಂಖ್ಯೆಗೆ ಕರೆ ಮಾಡಿ ವರದಿ ನೀಡಿ.

**ಮಾಡಬಾರದ ವಿಚಾರಗಳು:**

- ☒ ನಿಮ್ಮ ಡೆಬಿಟ್ ಕಾರ್ಡ್ ಅನ್ನು ಎಂದಿಗೂ ಎಟಿಎಂನಲ್ಲೇ ಬಿಟ್ಟುಹೋಗಬೇಡಿ.
- ☒ ಯಾವುದೇ ಎಟಿಎಂ ವಹಿವಾಟನ್ನು ನೆಡೆಸುವ ಸಲುವಾಗಿ, ಎಂದಿಗೂ ನಿಮ್ಮ ಕಾರ್ಡ್ ಅನ್ನು ಯಾರಿಗೂ ಕೊಡಬೇಡಿ ಅಥವಾ ನಿಮ್ಮ ಪಿನ್ ಅನ್ನು ಬಹಿರಂಗಪಡಿಸಬೇಡಿ.
- ☒ ನಿಮ್ಮ ಎಟಿಎಂ ಪಿನ್ ಅನ್ನು, ಕಾರ್ಡ್ ಅಥವಾ ಕಾರ್ಡ್ ನ ಕವರ್ ನ ಮೇಲೆ ಬರೆದಿಟ್ಟುಕೊಳ್ಳಬೇಡಿ ಅಥವಾ ಬೇರೆ ಯಾವುದೇ ಇತರ ಸಾಧನಗಳಲ್ಲೂ ಅದನ್ನು ಸಂಗ್ರಹಿಸಬೇಡಿ.
- ☒ ಎಟಿಎಂ ವಹಿವಾಟನ್ನು ಮಾಡುವಾಗ ನಿಮ್ಮ ಮೊಬೈಲ್ ಫೋನ್ ಬಳಸಬೇಡಿ.
- ☒ ಎಟಿಎಂ ಅನ್ನು ಬಳಸುವಾಗ ಯಾವುದೇ ರೀತಿಯಲ್ಲೂ ವಿಚಲಿತರಾಗಬೇಡಿ.
- ☒ ಜನ್ಮ ದಿನಾಂಕಗಳು ಹಾಗು ಇತ್ಯಾದಿಯಂತೆ ಸುಲಭವಾಗಿ ಊಹಿಸಬಹುದಾದ ಪಿನ್ ಅನ್ನು ಎಂದಿಗೂ ಇಟ್ಟುಕೊಳ್ಳಬೇಡಿ.
- ☒ ಎಟಿಎಂನಲ್ಲಿ ಅಪರಿಚಿತರಿಂದ ಎಂದಿಗೂ ಸಹಾಯ ತೆಗೆದುಕೊಳ್ಳಬೇಡಿ.